ಹಾಕಿದ. ಸಿಗ್ನಲ್ ಬಿತ್ತು. ಕಾರನ್ನು ಮುಂದಕ್ಕೆ ದಾಟಿಸಿದ. ಕಾರಿನಲ್ಲಿ ಕೂತ ರೇಣು ಕಣ್ಣಲ್ಲಿ ಅವಮಾನದ ಸೋಲಿನ ಅಸಹಾಯಕತೆಯ ಕಣ್ಣೀರು ಸುರಿಯುತ್ತಿತ್ತು. ತಲೆಕೂದಲೆಲ್ಲ ಕೆದರಿತ್ತು. ಗಿರೀಶ್ ಒಂದೇ ಒಂದು ಮಾತನಾಡದೆ ಭರ್ರನೆ ಕಾರು ಓಡಿಸಿದ. ಕಾರು ಸೀದಾ ಫೌಂಡೇಷನ್ ಕಚೇರಿಯ ಮುಂದೆ ನಿಂತಿತು. ರೇಣು ಕಣ್ಣಲ್ಲಿ ಇನ್ನೂ ಕಣ್ಣೀರು ಇಂಗಿರಲಿಲ್ಲ.

'ಕಣ್ಣೀರು ಒರೆಸಿಕೋ... ಅವರ ಮುಂದೆ ನೀನು ಇಷ್ಟು ವೀಕ್ ಆಗಿ ಕಾಣಿಸಿಕೊಳ್ಳಬಾರದು. ನೀನು ಯಾವಾಗಲೂ ಸ್ಟ್ರಾಂಗ್ ಆಗಿರಬೇಕು. ಅಲ್ಲಿ ಏನಾಯಿತು?' ಅಂದ.

'ಅವರು ದುಡ್ಡು ಕೇಳಿದ್ದಕ್ಕೆ ಆ ಮೋಟಾರ್ ಬೈಕ್‌ನವನು ನೀವೆಲ್ಲ ಭಿಕ್ಷೆ ಎತ್ತಿ ಬಿಯರ್ ಕುಡೀತೀರಿ ಅಂದ. ಅದಕ್ಕೆ ಅವಳಿಗೆ ಕೋಪ ಬಂದು ಅವನಿಗೆ ಹೊಡೆದಳು. ಅವನೂ ಹೊಡೆದ. ನಾನು ಬಿಡಿಸಕ್ಕೆ ಹೋದರೆ... ಹೋದರೆ... ಅವಳು ನನ್ನನ್ನೇ ಟಾರ್ಗೆಟ್ ಮಾಡಿ ಏನೇನೇನೋ ಬೈದಳು' ಅಳು ತಡೆಯಲು ಆಗಲೇ ಇಲ್ಲ.

ಸ್ವಲ್ಪ ಹೊತ್ತು ಅವಳನ್ನು ಅಳಲು ಬಿಟ್ಟ ಗಿರೀಶ. ಸ್ವಲ್ಪ ಸಮಾಧಾನವಾದ ಮೇಲೆ ಗಿರೀಶನನ್ನು ನೋಡುತ್ತಾ ರೇಣು ಒಂದು ಮಾತು ಹೇಳಿದಳು.



ಅದರಲ್ಲಿ ಗಿರೀಶ ಒಪ್ಪುವಂತೆ ಮಾತಾಡಿದರೆ ಅವನು ತನ್ನ ಬಗ್ಗೆ ಕೋಪ ತಾಳುವುದಿಲ್ಲ ಎನ್ನುವ ಗೂಢಾರ್ಥವಿತ್ತು.

'ಅಲ್ಲಾ ಗಿರೀಶ್, ಅವನು ಹೇಳಿದ್ದೂ ತಪ್ಪೇನಿಲ್ಲ ಬಿಡು. ಇವರು ಭಿಕ್ಷೆ ಬೇಡಿ ಬಿಯರ್ ಕುಡಕೊಂಡು ಮಜಾ ಮಾಡೋದು ಸರೀನಾ? ಎಷ್ಟು ಭಿಕ್ಷುಕರು ಹೊಟ್ಟೆಗಿಲ್ಲದೇ ಒದ್ದಾಡ್ತಾರೆ... ಇವರು ಮಾತ್ರ ಹೇಗೆ ದಬಾಯಿಸಿ ದುಡ್ಡು ಕಿತ್ತುಕೊಂಡು ಮಜಾ ಮಾಡ್ತಾರೆ' ಅಂದಳು.

ಗಿರೀಶ ಅವಳ ಕೂದಲು ಸರಿ ಮಾಡುತ್ತಾ ಹೇಳಿದ, 'ನೀನಾ ಈ ಮಾತು ಕೇಳ್ತಿರೋದು? ಒಬ್ಬರಿಗೆ ಭಿಕ್ಷೆ ಕೊಟ್ಟ ಮಾತ್ರಕ್ಕೆ ಅವರು ಲೈಫ್‌ನ ನಾವು ಒಪ್ಪುವ ಹಾಗೆ ಬದುಕಬೇಕು ಅಂತ ಯಾಕೆ ನಿರೀಕ್ಷಿಸಬೇಕು? ಅದು ಅವರ ಇಷ್ಟ. ಹೊಟ್ಟೆಗಿಲ್ಲದ ಭಿಕ್ಷುಕ ಸ್ವಲ್ಪ ಹಣ ಸಿಕ್ಕಿದ ಮೇಲೆ ಥಿಯೇಟರ್‌ಗೆ ಹೋಗಿ ಪಿಕ್ಚರ್ ನೋಡಿದರೆ ಅದು ತಪ್ಪು ಅಂತ ಹೇಳಬಾರದು. ನಾವು ಕೊಟ್ಟ ದುಡ್ಡಿನಿಂದ ಅವರು ಬಿಯರಾದರೂ ಕುಡೀಲಿ, ಪಿಕ್ಚರಿಗಾದರೂ ಹೋಗಲಿ, ಏನಾದರೂ ಮಾಡಲಿ. ಅವರಿಗೆ ಹೀಗೇ ಮಾಡಿ ಅನ್ನೋ ಡಿಕ್ಟೇಟರ್ ಧೋರಣೆ ಇಟ್ಟುಕೊಂಡರೆ ಅದು ಸರಿಯಲ್ಲ...'

ರೇಣು ಆಶ್ಚರ್ಯದಿಂದ ಗಿರೀಶನ ಮುಖವನ್ನೇ ನೋಡಿದಳು. ದಿನಾದಿನಾ ತನ್ನ ಹೋರಾಟದ ಬಗ್ಗೆ ಅಷ್ಟು ಗೇಲಿ ಮಾಡುತ್ತಿದ್ದವನು!

ಅವಳ ಗಲಿಬಿಲಿ ನೋಡಿ ಗಿರೀಶ್ ನಕ್ಕ.

'ಇಳಿ' ಅಂದು ಅವಳು ಇಳಿದ ಮೇಲೆ ಕಾರು ಓಡಿಸಿಕೊಂಡು ಹೋಗುವ ಬದಲು ತಾನೂ ಇಳಿದ.

ಅವಳ ಭುಜ ಬಳಸಿ ಹಿಡಿದು ಇಬ್ಬರೂ ಒಟ್ಟಿಗೇ ಮೆಟ್ಟಲು ಹತ್ತಿದರು. ಮೊದಲನೇ ಮಹಡಿಯಲ್ಲಿ ಕಚೇರಿಯ ಬಾಗಿಲು ತೆರೆದ ತಕ್ಷಣ ಒಳಗಿನಿಂದ ಜೋರಾಗಿ ಕೇಕೆ, ನಗು, ಚೀತ್ಕಾರ, ಚಪ್ಪಾಳೆ, ಸಿಳ್ಳೆ ಕೇಳಿ ಬಂತು. ಟೀವಿಯಲ್ಲಿ ಜೋರಾಗಿ ದೇಶದಲ್ಲೆಲ್ಲ ಸಂಭ್ರಮಿಸುತ್ತಿರುವ ಸುದ್ದಿ ಪ್ರಸಾರವಾಗುತ್ತಿತ್ತು.

'ರೇಣು... ಕಂಗ್ರಾಜುಲೇಷನ್ಸ್... ಥ್ಯಾಂಕ್ಯೂ... ಥ್ಯಾಂಕ್ಯೂ... ನಾವು ಗೆದ್ವಿ... ನಾವು ಗೆದ್ವಿ...' ಎಂದು ಕೂಗುತ್ತಾ ದೊಡ್ಡ ಗುಂಪು ಓಡಿ ಬಂದು ಅವರಿಬ್ಬರನ್ನೂ ಸುತ್ತುವರಿದು ಕುಣಿಯತೊಡಗಿತು. ರೇಣು ನಕ್ಕಳು. ●